# ಎನ್‌ಐಟಿಕೆ ಸುರತ್ಕಲ್ ವತಿಯಿಂದ ಜೋಟಾ ಕಾರ್ಯಕ್ರಮ

**ಮಹಾನಗರ, ಅ.22:** ಸುರತ್ಕಲ್‌ನ ಎನ್‌ಐಟಿಕೆ ವತಿಯಿಂದ 'ಸರ್ಚ್' (ಸಿಸ್ಟಮ್ ಫಾರ್ ಎಮರ್ಜೆನ್ಸಿ ಅಸಿಸ್ಟೆನ್ಸ್ ರೆಸ್ಪಾನ್ಸ್ ಮತ್ತು ಕಮ್ಯುನಿಕೇಷನ್ ಹಬ್) ಎಂಬ ವಿಷಯದಲ್ಲಿ ವಾರ್ಷಿಕ ಜಾಂಬೂರಿ ಆನ್ ದಿ ಏರ್ (ಜೋಟಾ) ಕಾರ್ಯಕ್ರಮ ನಡೆಯಿತು.

ಯುವ ಸ್ಕೌಟ್ಸ್ ಮತ್ತು ಗೈಡ್ಸ್ ಅನ್ನು ಹವ್ಯಾಸಿ ರೇಡಿಯೋ ಸಂವಹನ ಜಗತ್ತಿಗೆ ಪರಿಚಯಿಸುವ ಉದ್ದೇಶದಿಂದ ಎನ್ ಐಟಿಕೆಯ ಅಮೆಚೂರ್ ರೇಡಿಯೋ ಕ್ಲಬ್ (ವಿಯು 2 ಆರ್ ಇಸಿ) ಮಂಗಳೂರು



ಅಮೆಚೂರ್ ರೇಡಿಯೋ ಕ್ಲಬ್ (ಮಾರ್ಕ್) ಸಹಯೋಗದೊಂದಿಗೆ ಮಣಿಪಾಲ್ ಡಾಟ್ ನೆಟ್ ಪ್ರೈ.ಲಿ. ಬೆಂಬಲದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸ್ಥಳೀಯ ಶಾಲೆಗಳಿಂದ ಒಟ್ಟು 157 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಾರ್ಕ್‌ನ ವಿಷ್ಣುಮೂರ್ತಿ ಭಾಗವಹಿಸಿ, ಹವ್ಯಾಸಿ ರೇಡಿಯೋ ಕಾರ್ಯಾಚರಣೆಯ ಕುರಿತು ಮಾರ್ಗದರ್ಶನ ನೀಡಿದರು.

ಎನ್‌ಐಟಿಕೆಯ ಪ್ರೊಫೆಸರ್ ಇನ್ ಚಾರ್ಜ್ (ಟ್ರಾನ್ಸ್ ಡಿಸಿಪ್ಲಿನರಿ ರಿಸರ್ಚ್ ಅಂಡ್ ಡೆವಲಪ್ಮೆಂಟ್) ಮತ್ತು ಸರ್ಚ್ ಪ್ರಾಜೆಕ್ಟ್ ಹೆಡ್ ಡಾ| ಪೃಥ್ವಿರಾಜ್ ಯು. ಮತ್ತು ವಿಯು 2 ಆರ್‌ಇಸಿಯ ಕಸ್ಟೋಡಿಯನ್ ಡಾ| ಕೆ.ವಿ.ಗಂಗಾಧರನ್ ಮತ್ತು ಮನೀಶ್ ನೇತೃತ್ವದ ಸಿಎಸ್‌ಡಿ ಪ್ರಾಜೆಕ್ಟ್ ಸ್ಟಾಫ್ ತಂಡವು ಈ ಕಾರ್ಯಕ್ರಮವನ್ನು ಆಯೋಜಿಸಿದೆ.

Udayavani, Date:23/10/24, p, no - 02